All India Radio: Bangalore
National Bulletin In Kannada
19.09.2025 : 1310hrs
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
19.09.2025 : 1310hrs

**ಮುಖ್ಯಾಂಶಗಳು :**

1. ನವದೆಹಲಿಯಲ್ಲಿಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ಕೃಷಿ ಯಂತ್ರೋಪಕರಣಗಳಿಗಾಗಿ ಜಿಎಸ್‌ಟಿ ಸುಧಾರಣೆ ಕುರಿತ ಸಭೆ
2. ೨೦೪೭ರ ವೇಳೆಗೆ ವಿಕಸಿತ ಭಾರತದ ಕನಸು ನನಸಾಗಿಸುವಲ್ಲಿ ಮಹಿಳೆಯರ, ಯುವಕರ ಪಾತ್ರ ಅಗತ್ಯ: ಕೇಂದ್ರ ಸಚಿವ ಕಿರಣ್ ರಿಜಿಜು
3. ಮಳೆಗಾಲದ ನಂತರ ಚಾರ್‌ಧಾಮ್ ಯಾತ್ರೆ ೨೦೨೫ಕ್ಕಾಗಿ ಹೆಲಿಕಾಪ್ಟರ್ ಕಾರ್ಯಾಚರಣೆಗಳನ್ನು ಪುನರಾರಂಭಿಸಲು ನಾಗರಿಕ ವಿಮಾನಯಾನ ನಿರ್ದೇಶನಾಲಯ ಅನುಮತಿ
4. ಏಷ್ಯಾ ಕಪ್-೨೦೨೫ ಕ್ರಿಕೆಟ್; ಎ ಗುಂಪಿನ ಪಂದ್ಯದಲ್ಲಿಂದು ಭಾರತ, ಒಮಾನ್ ಮುಖಾಮುಖಿ

*******

ನವದೆಹಲಿಯಲ್ಲಿಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ಕೃಷಿ ಯಂತ್ರೋಪಕರಣಗಳಿಗಾಗಿ ಜಿಎಸ್‌ಟಿ ಸುಧಾರಣೆ ಕುರಿತ ಸಭೆ ನಡೆಯಿತು. ಇತ್ತೀಚೆಗೆ ಕೃಷಿ ಯಂತ್ರೋಪಕರಣಗಳ ಮೇಲೆ ವಿಧಿಸಲಾಗುತ್ತಿದ್ದ ಜಿಎಸ್ಟಿ ದರವನ್ನು ಶೇಕಡ ೧೨ ಮತ್ತು ೧೮ ರಿಂದ ಶೇಕಡ ೫ ಕ್ಕೆ ತರಲಾಗಿತ್ತು. ಈ ನಿರ್ಧಾರದ ಪರಿಣಾಮವನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಲು ಮತ್ತು ಈ ಸುಧಾರಣೆಯ ಸರಳ ಅನುಷ್ಠಾನಕ್ಕಾಗಿ ಕಾರ್ಯತಂತ್ರ ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಕೃಷಿ ಯಂತ್ರೋಪಕರಣಗಳ ಮೇಲಿನ ಜಿಎಸ್ಟಿ ದರ ಕಡಿತದಿಂದ ಉಂಟಾಗುವ ಲಾಭ ನೇರ ಹಾಗೂ ತ್ವರಿತವಾಗಿ ರೈತರಿಗೆ ತಲುಪಬೇಕು ಎಂದು ಒತ್ತಿ ಹೇಳಿದರು. ಇದನ್ನು ಇದೇ ೨೨ ರಿಂದಲೇ ಕಾರ್ಯಗತಗೊಳಿಸಬೇಕು ಎಂದು ಸಚಿವರು ತಿಳಿಸಿದ್ದಾರೆ. ಇದು ಸಣ್ಣ ಮಟ್ಟದ ರಿಯಾಯಿತಿ ಅಲ್ಲ ಹಾಗಾಗಿ ಅವರ ಆದಾಯದ ಮೇಲೆ ನೇರ ಸಕಾರಾತ್ಮಕ ಪರಿಣಾಮ ಬೀರಲಿದೆ. ರೈತರು ತಂತ್ರಜ್ಞಾನಚಾಲಿತ ಕೃಷಿ ಉಪಕರಣಗಳನ್ನು ಕಡಿಮೆ ಬೆಲೆಯಲ್ಲಿ ಪಡೆಯುವ ಅವಕಾಶ ಹೊಂದಲಿದ್ದಾರೆ, ಇದು ಅವರಿಗೆ ಉತ್ತಮ ಉತ್ಪಾದನೆ ಹಾಗೂ ಉಳಿತಾಯ ಸಾಧಿಸಲು ನೆರವಾಗಲಿದೆ ಎಂದು ಸಚಿವರು ಹೇಳಿದರು.

**********

೨೦೪೭ರ ವೇಳೆಗೆ ವಿಕಸಿತ ಭಾರತ ನಿರ್ಮಾಣ ಮಾಡುವ ಹಾದಿಯಲ್ಲಿ ಮಹಿಳೆಯರು ಮತ್ತು ಯುವಕರು ನೇರವಾಗಿ ಹಾಗೂ ಸಕ್ರಿಯವಾಗಿ ಭಾಗವಹಿಸಬೇಕಿದೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಎಂದು ಹೇಳಿದ್ದಾರೆ. ನವದೆಹಲಿಯಲ್ಲಿ ಫ್ಯೂಚರ್ ಫ್ರಾಂಟಿಯರ್ ಸಮಾವೇಶದಲ್ಲಿ ಮಾತನಾಡಿದ ಸಚಿವರು, ಮಹಿಳಾ ನೇತೃತ್ವದ ಅಭಿವೃದ್ಧಿಯೇ ಸರ್ಕಾರದ ಧ್ಯೇಯವಾಗಿದೆ. ಭಾರತವು ಈಗಾಗಲೇ ವಿಶ್ವದ ಮೂರನೇ ಅತಿದೊಡ್ಡ ಅರ್ಥವ್ಯವಸ್ಥೆ ಆಗುವ ದಿಕ್ಕಿನಲ್ಲಿ ಮುಂದೆ ಸಾಗುತ್ತಿದೆ. ಕಳೆದ ಹನ್ನೊಂದು ವರ್ಷಗಳಲ್ಲಿ ದೇಶ ೧೧ನೇ ಸ್ಥಾನದಿಂದ ೫ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಅಭಿವೃದ್ಧಿಗೊಂಡಿದೆ ಎಂದು ಅವರು ಹೇಳಿದರು.

**********

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರವು ಮಹಿಳಾ ಸಬಲೀಕರಣವನ್ನು ಹೇಗೆ ಉತ್ತೇಜಿಸಿದೆ ಎಂಬುವುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

*ಭಾರತವು ಜಗತ್ತಿನಲ್ಲಿಯೇ ಅತ್ಯಂತ ವೈವಿಧ್ಯಮಯ ಮತ್ತು ಉಜ್ವಲವಾದ ಜನಜಾತಿ ಸಮುದಾಯಗಳ ನೆಲೆಯಾಗಿದ್ದು, ಸುಮಾರು ೧೦ ಕೋಟಿ ೪೫ ಲಕ್ಷ ಜನಜಾತಿ ನಾಗರಿಕರು ಇಲ್ಲಿ ವಾಸಿಸುತ್ತಿದ್ದಾರೆ. ಈ ಸಮುದಾಯಗಳು ದೇಶದ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ ೮.೬ ರಷ್ಟು ಪಾಲು ಹೊಂದಿದೆ. ಕಳೆದ ದಶಕದಲ್ಲಿ, ಜನಜಾತಿ ವ್ಯವಹಾರಗಳ ಸಚಿವಾಲಯದ ಬಜೆಟ್ ಮೂರರಷ್ಟು ಹೆಚ್ಚಾಗಿ, ೨೦೧೩-೧೪ ರಲ್ಲಿ ಸುಮಾರು ೪ ಸಾವಿರ ೩೦೦ ಕೋಟಿ ರೂಪಾಯಿಯಿಂದ, ೨೦೨೪-೨೫ರಲ್ಲಿ ೧೩ ಸಾವಿರದ ಕೋಟಿ ರೂಪಾಯಿಗೆ ಏರಿಕೆಗೊಂಡಿದೆ. ಸರ್ಕಾರ ಆರಂಭಿಸಿದ ಪ್ರಮುಖ ಯೋಜನೆಗಳಲ್ಲಿ, ನಿಗದಿತ ಜನಜಾತಿಗಳ ಅಭಿವೃದ್ಧಿಗಾಗಿ ಕಾರ್ಯ ಯೋಜನೆಗೆ ನೀಡಿದ ಅನುದಾನ ೨೦೧೩-೧೪ರ ನಂತರ ಐದರಷ್ಟು ಹೆಚ್ಚಾಗಿದೆ. ಪ್ರಧಾನಮಂತ್ರಿ ಜನ ಜಾತಿ ಆದಿವಾಸಿ ನ್ಯಾಯ ಅಭಿಯಾನ ವಿಶೇಷವಾಗಿ ದುರ್ಬಲ ಜನಜಾತಿ ಸಮುದಾಯಗಳ ನ್ಯಾಯ, ಘನತೆ ಮತ್ತು ಸಬಲತೆಯ ಶಕ್ತಿಯುತ ಯೋಜನೆಯಾಗಿ ರೂಪುಗೊಂಡಿದೆ. ಈ ಯೋಜನೆಯು ೧೧ ರಾಜ್ಯಗಳು ಮತ್ತು ೧ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ೭೫ ಸಮುದಾಯಗಳ ಜೀವನವನ್ನು ರೂಪಾಂತರಿಸುತ್ತಿದ್ದು, ೪೭ ಲಕ್ಷಕ್ಕಿಂತ ಹೆಚ್ಚು ಜನಜಾತಿ ಜನತೆಗೆ ಲಾಭ ನೀಡುತ್ತಿದೆ. ಈ ಯೋಜನೆಗಾಗಿ ೨೪ ಸಾವಿರ ಕೋಟಿ ರೂಪಾಯಿ ಅನುದಾನ ನೀಡಲಾಗಿದೆ.ಧರತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆಯು ೧೭ ವಿವಿಧ ಸಚಿವಾಲಯಗಳು ಜಾರಿಗೆ ತಂದಿರುವ ೨೫ ವಿವಿಧ ಉಪಕ್ರಮಗಳನ್ನು ಒಳಗೊಂಡಿದೆ. ಇದರ ಉದ್ದೇಶ ೬೩ ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ಉತ್ತಮಗೊಳಿಸುವ ಮೂಲಕ ಮೂಲಸೌಕರ್ಯ ಕೊರತೆ ನಿವಾರಣೆ ಮಾಡಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ೫ ಕೋಟಿ ಜನಜಾತಿ ಸಮುದಾಯದ ಸದಸ್ಯರಿಗೆ ಲಾಭ ನೀಡುವುದಾಗಿದೆ.*

**********

ಮಳೆಗಾಲದ ನಂತರ ಚಾರ್‌ಧಾಮ್ ಯಾತ್ರೆ ೨೦೨೫ಕ್ಕಾಗಿ ಹೆಲಿಕಾಪ್ಟರ್ ಕಾರ್ಯಾಚರಣೆಗಳನ್ನು ಪುನರಾರಂಭಿಸಲು ನಾಗರಿಕ ವಿಮಾನಯಾನ ನಿರ್ದೇಶನಾಲಯ ಅನುಮತಿ ನೀಡಿದೆ. ಚಾರ್ ಧಾಮ್ ಕಾರ್ಯಾಚರಣೆಗಳ ಸುರಕ್ಷತೆಯನ್ನು ಹೆಚ್ಚಿಸುವ ಕಾರ್ಯತಂತ್ರದ ಉಪಕ್ರಮಗಳನ್ನು ಕಠಿಣ ಪರಿಶೀಲನೆಯ ನಂತರ ಜಾರಿಗೆ ತರಲಾಗಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ನಾಗರಿಕ ವಿಮಾನ ಯಾನ ನಿರ್ದೇಶನಾಲಯ,ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಉತ್ತರಾಖಂಡದ ಸರ್ಕಾರದ ನಡುವೆ ನಿಕಟ ಸಮನ್ವಯವನ್ನು ಖಚಿತಪಡಿಸಿಕೊಳ್ಳಲು ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರು ಉತ್ತರಾಖಂಡದ ಮುಖ್ಯಮಂತ್ರಿ ಪು?ರ್ ಸಿಂಗ್ ಧಾಮಿ ಅವರೊಂದಿಗೆ ಡೆಹ್ರಾಡೂನ್ ಮತ್ತು ದೆಹಲಿಯಲ್ಲಿ ಪರಿಶೀಲನಾ ಸಭೆಗಳನ್ನು ನಡೆಸಿದ್ದಾರೆ. ಕೆಲವು ದಿನಗಳ ಹಿಂದೆ ನಾಗರಿಕ ವಿಮಾನ ಯಾನ ಸಚಿವಾಲಯವು ತಂಡವು ಎಲ್ಲಾ ಹೆಲಿಪ್ಯಾಡ್‌ಗಳು, ಹೆಲಿಕಾಪ್ಟರ್‌ಗಳು, ನಿರ್ವಾಹಕರ ಸನ್ನದ್ಧತೆ ಮತ್ತು ಬೆಂಬಲ ಸೌಲಭ್ಯಗಳ ಸಮಗ್ರ ತಪಾಸಣೆಯನ್ನು ಸಹ ನಡೆಸಿತು. ಉತ್ತರಾಖಂಡದ ಎತ್ತರದ ಮತ್ತು ದೂರದ ಪ್ರದೇಶಗಳಲ್ಲಿರುವ ದೇವಾಲಯಗಳಿಗೆ ಯಾತ್ರಿಕರ ಸಂಚಾರ ಸುಗಮಗೊಳಿಸುವಲ್ಲಿ ಹೆಲಿಕಾಪ್ಟರ್ ಸೇವೆಗಳ ನಿರ್ಣಾಯಕ ಪಾತ್ರವನ್ನು ಗುರುತಿಸಿ, ನಾಗರಿಕ ವಿಮಾನಯಾನ ನಿರ್ದೇಶನಾಲಯ ಸುರಕ್ಷಿತ ಮತ್ತು ತಡೆರಹಿತ ಕಾರ್ಯಾಚರಣೆಗಳನ್ನು ಖಚಿತಪಡಿಸಿಕೊಳ್ಳಲು ಸುರಕ್ಷತಾ ಕ್ರಮಗಳನ್ನು ಜಾರಿಗೆ ತಂದಿದೆ ಎಂದು ಸಚಿವಾಲಯ ತಿಳಿಸಿದೆ.

**********

ಲಖನೌದ ಚೌಧರಿ ಚರಣ್ ಸಿಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ದೊಡ್ಡ ಮಾದಕ ದ್ರವ್ಯ ಕಾರ್ಯಾಚರಣೆಯಲ್ಲಿ, ಕಸ್ಟಮ್ಸ್ ಅಧಿಕಾರಿಗಳು ಸುಮಾರು ೫ ಕೋಟಿ ರೂಪಾಯಿ ಮೌಲ್ಯದ ಮಾದಕ ವಸ್ತುಗಳನ್ನು ಪತ್ತೆಹಚ್ಚಿ, ಮುಂಬೈನ ಇಬ್ಬರನ್ನು ಬಂಧಿಸಿದ್ದಾರೆ.

**********

ಯೆಮೆನ್‌ನ ಹೌತಿ ಸಂಘಟನೆ ಇಸ್ರೇಲಿ ನಗರಗಳನ್ನು ಗುರಿಯಾಗಿಸಿಕೊಂಡು ಹೈಪರ್‌ಸಾನಿಕ್ ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು ಮೂರು ಡ್ರೋನ್ ದಾಳಿಗಳ ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಹೌತಿ ಮೂಲಗಳ ಪ್ರಕಾರ, ಕ್ಷಿಪಣಿ, ಜಾಫಾದಲ್ಲಿನ ಮಿಲಿಟರಿ ತಾಣವನ್ನು ಗುರಿಯಾಗಿಸಿದರೆ, ಡ್ರೋನ್‌ಗಳು ಬೀರ್ ಶೆವಾ ಮತ್ತು ಬಂದರು ನಗರವಾದ ಐಲಾತ್ ಅನ್ನು ಗುರಿಯಾಗಿಸಿಕೊಂಡಿವೆ. ಇಸ್ರೇಲ್ ರಕ್ಷಣಾ ಪಡೆಗಳು ಸ್ಫೋಟಕಗಳನ್ನು ತಡೆಹಿಡಿದಿವೆ ಎಂದು ವರದಿ ಮಾಡಿದೆ. ಆದರೆ ಐಲಾತ್‌ನಲ್ಲಿರುವ ಹೋಟೆಲ್‌ಗೆ ಡ್ರೋನ್ ಡಿಕ್ಕಿ ಹೊಡೆದಿದೆ ಎಂದು ದೃಢಪಡಿಸಿದೆ, ಇದರಿಂದಾಗಿ ಯಾವುದೇ ಸಾವುನೋವು ಸಂಭವಿಸಿಲ್ಲ. ಟೆಲ್ ಅವೀವ್ ಸೇರಿದಂತೆ ಮಧ್ಯ ಇಸ್ರೇಲ್‌ನಾದ್ಯಂತ ವಾಯುದಾಳಿ ಸೈರನ್‌ಗಳನ್ನು ಮೊಳಗಿಸಲಾಗಿದೆ, ಅಕ್ಟೋಬರ್ ೨೦೨೩ ರಲ್ಲಿ ಗಾಜಾ ಸಂಘರ್ಷ ಪ್ರಾರಂಭವಾದಾಗಿನಿಂದ ಹೌತಿ, ಇಸ್ರೇಲ್ ಅನ್ನು ಪದೇ ಪದೇ ಗುರಿಯಾಗಿಸಿದದೆ. ಯೆಮೆನ್‌ನಲ್ಲಿರುವ ಹೌತಿ ನಿಯಂತ್ರಿತ ಪ್ರದೇಶಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿಯೊಂದಿಗೆ ಪ್ರತಿಕ್ರಿಯಿಸಿದೆ.

**********

ರಷ್ಯಾದ ಪೂರ್ವ ಭಾಗದ ಕಮ್ಚಾಟ್ಕ ಪ್ರದೇಶದಲ್ಲಿ ಇಂದು ಬೆಳಿಗ್ಗೆ ಭಾರಿ ಭೂಕಂಪನ ಸಂಭವಿಸಿದ್ದು, ಪ್ರದೇಶದಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ. ಭೂಕಂಪದ ತೀವ್ರತೆ ೭.೮ ರಷ್ಟು ದಾಖಲಾಗಿದ್ದು, ಭೂಕಂಪದ ಕೇಂದ್ರ ಬಿಂದುವು ಭೂಮಿಯಿಂದ ಕೇವಲ ೧೦ ಕಿಮೀ ಆಳದಲ್ಲಿದೆ ಎಂದು ಅಮೆರಿಕಾ ಭೂಸಮೀಕ್ಷಾ ಸಂಸ್ಥೆ ತಿಳಿಸಿದೆ. ಆದರೆ, ರಷ್ಯಾ ಭೂಭೌತಶಾಸ್ತ್ರೀಯ ಸೇವೆ, ಈ ಭೂಕಂಪದ ತೀವ್ರತೆಯನ್ನು ಸ್ವಲ್ಪ ಕಡಿಮೆ ಎಂದರೆ ೭.೪ ಎಂದು ದಾಖಲಿಸಿದೆ.

**********

ಅಂತಾರಾಷ್ಟ್ರೀಯ ಹಣಕಾಸು ನಿಧಿಯ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಾಲಿನಾ ಜಾರ್ಜೀವಾ ಅವರು, ಐಎಂಎಫ್‌ನ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಡಾನಿಯಲ್ ಕ್ಯಾಟ್ಸ್ ಅವರನ್ನು ನೇಮಕ ಮಾಡುವಂತೆ ಶಿಫಾರಸು ಮಾಡಿದ್ದಾರೆ.

**********

ಅಬುಧಾಬಿಯ ಶೇಖ್ ಜಾಯೆದ್ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಏಷ್ಯಾ ಕಪ್-೨೦೨೫ ಕ್ರಿಕೆಟ್ ಟೂರ್ನಿಯ ತನ್ನ ಅಂತಿಮ ಎ ಗುಂಪಿನ ಪಂದ್ಯದಲ್ಲಿ ಭಾರತ, ಒಮಾನ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ಭಾರತ ಈಗಾಗಲೇ ಎರಡು ಪಂದ್ಯಗಳಿಂದ ನಾಲ್ಕು ಅಂಕಗಳನ್ನು ಗಳಿಸಿ ಸೂಪರ್ ೪ ಹಂತಕ್ಕೆ ಸ್ಥಾನ ಖಚಿತಪಡಿಸಿಕೊಂಡಿದೆ, ಇತ್ತ ಒಮಾನ್ ಟೂರ್ನಿಯಿಂದ ಹೊರಬಿದ್ದಿದೆ.

*****END*****